ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಮತ್ತು ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು)

ಅ. ಹೌದು.

ಆ. ಈ ಸ್ಥಳದ ಅಭಿವೃದ್ಧಿಗೆ ಯೋಜನೆ ರೂಪಿಸಿಕೊಂಡಿಲ್ಲ.

ಹೈಕೋರ್ಟ್ ಪೀಠ ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಸ್ಥಾಪನೆ.

566 (1309) ಶ್ರೀ ಬಾಟಾಳ್ ನಾಗರಾಜ್ (ಚಾಮರಾಜನಗರ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಹೈಕೋರ್ಟ್ ಪೀಠವನ್ನು ಸ್ಥಾಪಿಸುವಂತೆ ಕೋರಿ ಯಾವ ಯಾವ ಜಿಲ್ಲೆಗಳಿಂದ ಮನವಿ ಬಂದಿವೆ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):–

ಧಾರವಾಡ, ಗುಲ್ಬರ್ಗಾ, ಬೀದರ್, ಬೆಳಗಾವಿ, ವಿಜಾಪುರ, ದಕ್ಷಿಣ ಕನ್ನಡ, ರಾಯಚೂರು ಜಿಲ್ಲೆಗಳಿಂದ ಹೈಕೋರ್ಟ್ ಪೀಠವನ್ನು ಸ್ಥಾಪಿಸುವಂತೆ ಕೋರಿ ಮನವಿ ಬಂದಿವೆ.

ಶಹಾಪುರದಲ್ಲಿ ರಸ್ತೆ ಸಾರಿಗೆ ಸಂಸ್ಥೆ ಡಿಪೋ.

567 (1329): ಶ್ರೀ ಶಿವಶೇಖರಪ್ಪಗೌಡ ಶಿರವಾಳ, (ಶಹಾಪುರ)

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಗುಲ್ಬರ್ಗ ಜಿಲ್ಲೆಯ ಶಹಾಪುರದಲ್ಲಿನ ಕ. ರಾ. ರ. ಸಾ. ಸಂಸ್ಥೆ ಡಿಪೋದಲ್ಲಿನ ಬಸ್‌ಗಳ ಸಂಖ್ಯೆ : ಎಷ್ಟು:

ಆ. ಈ ಪೈಕಿ ಎಷ್ಟು ಬಸ್‌ಗಳು ಚಾಲ್ತಿಯಲ್ಲಿ ಇರುತ್ತವೆ ?

ಇ. ಡಿಪೋಗೆ ಬರುತ್ತಿರುವ ಪ್ರತಿ ತಿಂಗಳ ಆದಾಯವೆಷ್ಟು ?

ಈ. ಎಷ್ಟು ತಿಂಗಳಿಂದ ನಷ್ಟ ಅನುಭವಿಸುತ್ತಿದೆ ?

ಉ. ಇತ್ತೀಚೆಗೆ ಬಸ್ ದರ ಹೆಚ್ಚಿಸಿದ ನಂತರ ಬರುತ್ತಿರುವ ಆದಾಯವೆಷ್ಟು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ. ದಿನಾಂಕ: 24.2.93ಕ್ಕೆ ಶಹಾಪುರ ಘಟಕದಲ್ಲಿ 76 ಬಸ್‌ಗಳು ಇರುತ್ತವೆ.

ಆ. 70 ಬಸ್‌ಗಳು ಚಾಲ್ತಿಯಲ್ಲಿರುತ್ತವೆ.

ಇ. ಏಪ್ರಿಲ್‌ನಿಂದ ಡಿಸೆಂಬರ್ 92ರವರೆಗಿನ ತಿಂಗಳುವಾರು ಸಾರಿಗೆ ಆದಾಯವು (ಟ್ರಾಫಿಕ್ ರೆವಿನ್ಯು) ಈ ಕೆಳಕಂಡಂತಿವೆ.

ಏಪ್ರಿಲ್	31.74 ಲಕ್ಷ ರೂ.ಗಳು
ಮೇ	31.88 ಲಕ್ಷ ರೂ.ಗಳು
ಜೂನ್	27.78 ಲಕ್ಷ ರೂ.ಗಳು
ಜುಲೈ	29.68 ಲಕ್ಷ ರೂ.ಗಳು

ಆಗಸ್ಟ್	26.34 ಲಕ್ಷ ರೂ.ಗಳು
ಸೆಪ್ಟೆಂಬರ್	24.08 ಲಕ್ಷ ರೂ.ಗಳು
ಅಕ್ಟೋಬರ್	26.77 ಲಕ್ಷ ರೂ.ಗಳು
ನವೆಂಬರ್	27.05 ಲಕ್ಷ ರೂ.ಗಳು
ಡಿಸೆಂಬರ್	24.11 ಲಕ್ಷ ರೂ.ಗಳು

ಈ. ಶಹಾಪುರ ಘಟಕವು ದಿನಾಂಕ: 24.7.88ರಂದು ಪ್ರಾರಂಭವಾಗಿದ್ದು, ಇದುವರೆವಿಗೂ ಲಾಭಗಳಿಸಿರುವುದಿಲ್ಲ.

ಉ. ಇತ್ತೀಚೆಗೆ ಬಸ್ ದರ ಏರಿಸಿದ ನಂತರ ದಿನಾಂಕ: 7.2.93ರಿಂದ ಪ್ರತಿ ದಿನದ ಸರಾಸರಿ ಆದಾಯವು 1.13 ಲಕ್ಷಗಳಾಗಿದ್ದು ದಿನಾಂಕ: 18 2.93ರಿಂದ ಬಸ್ ದರದ ಪುನರ್ ಪರಿಷ್ಕರಣದ ನಂತರ ಪ್ರತಿ ದಿನದ ಸರಾಸರಿ ಆದಾಯವು 1.10 ಲಕ್ಷ ರೂ.ಗಳು ಬರುತ್ತಿದೆ.

ಬಂಟ್ವಾಳ ತಾಲ್ಲೂಕಿನಲ್ಲಿ ಕ್ರೀಡಾಂಗಣ ನಿರ್ಮಾಣದ ಬಗ್ಗೆ.

568 (1120): ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ)

ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಮತ್ತು ಕ್ರೀದಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬಂಟ್ವಾಳ ತಾಲ್ಲೂಕಿನಲ್ಲಿ ಒಂದು ಕ್ರೀಡಾಂಗಣದ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ. ಬಂದಿದ್ದರೆ, ಕ್ರೀಡಾಂಗಣ ನಿರ್ಮಿಸಲು ಬೇಕಾಗುವ ಹಣವೆಷ್ಟು: ನಿರ್ಮಿಸಲು ಇದುವರೆವಿಗೂ ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು):–

ಅ. ಹೌದು.

ಆ. ಕ್ರೀಡಾಂಗಣ ನಿರ್ಮಾಣಕ್ಕೆ ಅವಶ್ಯವಾದ ನಿವೇಶನವನ್ನು ಪಡೆಯಲು ಕ್ರಮ ಕೈಗೊಳ್ಳಲಾಗುತ್ತಿದೆ.

1993-94ನೇ ಸಾಲಿಗೆ ಹೆಂಡದ ಅಂಗಡಿಗಳನ್ನು ಜಿಲ್ಲಾವಾರು ಮತ್ತು ತಾಲ್ಲೂಕುವಾರು ಸಿಲಂ ಮಾಡುವ ಬಗ್ಗೆ.

569 (1121): ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ):

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. 1993-94ನೇ ಸಾಲಿಗೆ ಹೆಂಡದ ಅಂಗಡಿಗಳನ್ನು ಜಿಲ್ಲಾವಾರು ಮತ್ತು ತಾಲ್ಲೂಕುವಾರು ಏಲಂ ಮಾಡುವುದೇ ?

ಆ. ಅಂಗಡಿವಾರು ಏಲಂ ಮಾಡುವುದರಿಂದ ನಿರುದ್ಯೋಗಿ ಯುವಕರಿಗೆ ಅನುಕೂಲವಾಗುವುದಿಲ್ಲವೆ ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):–